ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **286/2021** ಸಿ.ಡಬ್ಲ್ಯೂ **02,** ಪಿ.ಡಬ್ಲ್ಯೂ **02**

| | | |
|---|---|---|
| ಸಾಕ್ಷಿಯ ಹೆಸರು | - ಬಸವರಾಜ್ | ದಿನಾಂಕ 13-02-2023 |
| ತಂದೆಯ ಗಂಡನ ಹೆಸರು | - ತೀಮಾರೆಡ್ಡಿ | ರಂದು ಪ್ರಮಾಣ ವಚನ |
| ವಯಸ್ಸು | - 34 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಖಾಸಗಿ ನೌಕರ | |
| ವಾಸ ಸ್ಥಳ | - ಕೂರೆಕುಪ್ಪ | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನಾನು ಆರೋಪಿಯನ್ನು ನೋಡಿರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಠಾಣೆಗೆ ಹೋಗಿದ್ದಾಗ ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ನಿಪಿ 2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ತನ್ನ ಸಮಕ್ಷಮದಲ್ಲಿ ಯಾವುದೆ ಮಸ್ತುಗಳನ್ನು ಜಪ್ತು ಪಡೆಸಿಕೊಂಡಿರುವುದಿಲ್ಲ. ನಿಪಿ 2 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು**.

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ.**

ದಿಃ **20-5-2021** ರಂದು ಸಂಜೆ **6.30** ರಿಂದ **7** ರ ಸಮಯದಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ **3** ರವರನ್ನು ಬಳ್ಳಾರಿ ಹೊಸಪೇಟೆ ರಸ್ತೆಯ ಹತ್ತಿರ ಇರುವ ಅರ್ ಅರ್ ಡಾಬಾದಲ್ಲಿ ಪಂಚನಾಮೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿತ ಒಂದು ಪ್ಲಾಸ್ಟಿಕ ಚೀಲದಲ್ಲಿ **180** ಎಂ ಎಲ್ ನ **8** ಪಿ.ಎಂ ವಿಸ್ಕಿ **2** ಪ್ಯಾಕೇಟ್ ಗಳು , **180** ಎಂ ಎಲ್ ನ **5** ಬ್ಯಾಗ್ ಪೇಪರ್ ವಿಸ್ಕಿ ಪಾಕೇಟ್ ಗಳು, **180** ಎಂ ಎಲ್ ನ ರಾಯಲ್ ಸ್ಟಾಂಗ್ **4** ಬಾಟಲಿಗಳು ಮತ್ತು **180** ಎಂ ಎಲ್ ನ ಇಂಪಿಯರ್ ಬ್ಲೂಯ್ಯ **4** ಬಾಟಲಿಗಳು ಮತ್ತು ಆರೋಪಿ ಬಳಿ ಇದ್ದ ನಗದು ಹಣ ರೂ. **250/-** ನ್ನು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡೆಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**

## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **286/2021** ಸಿ.ಡಬ್ಲೂ **01,** ಪಿ.ಡಬ್ಲೂ **01**

| | | |
|---|---|---|
| ಸಾಕ್ಷಿಯ ಹೆಸರು | - ಕಾಳಿಂಗ | ದಿನಾಂಕ 13-02-2023 |
| ತಂದೆಯ ಹೆಸರು | - ಬಸವರಾಜ್ | ರಂದು ಪ್ರಮಾಣ ವಚನ |
| ವಯಸ್ಸು | - 34 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಪಿ.ಎಸ್.ಐ, ಸಂಡೂರು ಪೋಲಿಸ ಠಾಣೆ | |
| ವಾಸ ಸ್ಥಳ | - ಸಂಡೂರು | |

### ಮುಖ್ಯ ವಿಚಾರಣೆ ಸಸಅ ರವರಿಂದ

* * * *

ನಾನು **24-07-2020** ರಿಂದ **02-02-2023** ರವರೆಗೆ ಪಿ.ಎಸ್.ಐ ಆಗಿ ತೋರಣಗಲ್ಲ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ **20-5-2021** ರಂದು ಸಂಜೆ **5** ಗಂಟೆಗೆ ನಾನು ಚಾಸಾ **4** ರವರ ಜೊತೆಗೆ ಇಲಾಖಾ ಜೀಪ್ ನಲ್ಲಿ ಕೋವಿಡ್ **19** ತಡೆಗಟ್ಟುವ ವಿಚಾರವಾಗಿ ಗಸ್ತು ಮಾಡುತ್ತ ತೋರಣಗಲ್ಲ ರೈಲ್ವೆ ನಿಲ್ದಾಣದ ಅಂಜಿನೆಯ ಗುಡಿ ಹತ್ತಿರ ಇದ್ದಾಗ ಸಂಜೆ **6.15** ಕ್ಕೆ ಹೊಸಪೇಟೆ ರಸ್ತೆಯ ಅರ್ ಅರ್ ಡಾಬಾದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು ನಾನು ಚಾಸಾ **4** ರವರ ಮೂಲಕ ಇಬ್ಬರು ಪಂಚರನ್ನು ಮಾಡಿಕೊಂಡು ಅವರಿಗೆ ವಿಷಯ ತಿಳಿಸಿ ಸಂಜೆ **6.30** ರ ಸುಮಾರಿಗೆ ಅಲ್ಲಿಂದ ಹೋರಟು ಸಂಜೆ **6.45** ಕ್ಕೆ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಬಾಟಲಿಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವಾಗ ನಾವು ದಾಳಿ ಮಾಡಿ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ತನ್ನ ಹಸೆರು ರಾಮಲಿಂಗಪ್ಪ ಎಂದು ತಿಳಿಸಿದನು ನಂತರ ಪಂಚರ ಸಮಕ್ಷಮ ಆರೋಪಿಯ ಅಂಗ ಶೋಧನೆ ಮಾಡಿದಾಗ ನಗದು ಹಣ ರೂ. **250/-** ಇತ್ತು ಮತ್ತು ಪ್ಲಾಸ್ಟಿಕ ಚೀಲದಲ್ಲಿ **180** ಎಂ ಎಲ್ ನ **8** ಪಿ.ಎಂ ವಿಸ್ಕಿ **2** ಪ್ಯಾಕೇಟ್ ಗಳು , **180** ಎಂ ಎಲ್ ನ **5** ಬ್ಯಾಗ್ ಪೇಪರ್ ವಿಸ್ಕಿ ಪಾಕೇಟ್ ಗಳು, **180** ಎಂ ಎಲ್ ನ ರಾಯಲ್ ಸ್ಟಂಗ್ **4** ಬಾಟಲಿಗಳು ಮತ್ತು **180** ಎಂ ಎಲ್ ನ ಇಂಪಿಯರ್ ಬ್ಲೂಯ್ಯ **4** ಬಾಟಲಿಗಳು ಇದ್ದವು. ಇವುಗಳನ್ನು ಒಂದು ಚೀಲದಲ್ಲಿ ಹಾಕಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡೆಸಿಕೊಂಡು ಠಾಣೆಗೆ ಬಂದು ಆರೋಪಿಯ ವಿರುದ್ದ ಠಾಣಾಧಿಕಾರಿಗಳಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನಿಪಿ **1** ಎಂದು ಸಾಕ್ಷಿಯ ಸಹಿಯನ್ನು ನಿಪಿ **1** ಎ ಎಂದು, ಪಂಚನಾಮೆಯನ್ನು ನಿಪಿ **2** ಎಂದು ಸಾಕ್ಷಿಯ ಸಹಿಯನ್ನು ನಿಪಿ

2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**